ಸೃಜನಿ

SRUJANI: Indian Journal of Innovative Research and Development (SIJIRD)
Volume-3 Issue 6, January - February 2025, Pp. 67-71
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಎಂ.ಕೆ ಇಂದಿರಾ ಅವರ ಕಾದಂಬರಿ ಆಧಾರಿತ ಚಲನಚಿತ್ರ 'ಪೂರ್ವಾಪರ' : ತಾಯಿ ಮಗನ ಸಂಬಂಧದ ಜಿಜ್ಞಾಸೆಗಳು

**ಅಭಿಷೇಕ್ ವೈ.ಎಸ್**
ಸಂಶೋಧನಾ ವಿದ್ಯಾರ್ಥಿ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

***Abstract:***
*ಎಂ.ಕೆ ಇಂದಿರಾ ಅವರ 'ಪೂರ್ವಾಪರ' 1980ರಲ್ಲಿ ಮೊದಲ ಮುದ್ರಣವಾಗಿ ಪ್ರಕಟವಾದ ಕಾದಂಬರಿ. ವಿದೇಶದಲ್ಲಿ ನೆಲೆಸಿರುವ ಮಗನನ್ನು ಮತ್ತೆ ತಾಯ್ನಾಡಿಗೆ ಕರೆತಂದು ಆತನೊಟ್ಟಿಗೆ ಬದುಕುವ ಅವಕಾಶಗಳು ತಪ್ಪಿಹೋದಾಗ ಪರಿತಪಿಸುವ ತಾಯಿಯೊಬ್ಬಳ ತೊಳಲಾಟದ ಕಥೆಯಾಗಿದೆ. ಉನ್ನತ ವಿದ್ಯಾಭ್ಯಾಸಕ್ಕೆಂದು ಮಾತ್ರವೇ ಹೋದ ಮಗ ಸುಂದರ ಅಲ್ಲಿನ ಪರಿಸರವನ್ನು ಮೆಚ್ಚಿ, ಔದ್ಯೋಗಿಕ ಅವಕಾಶಗಳ ಕಾರಣಗಳಿಂದ ಅಲ್ಲಿಯೇ ಉಳಿಯುವ ನಿರ್ಧಾರ ಮಾಡುತ್ತಾನೆ. ಕುಟುಂಬದವರ ಇಚ್ಛೆಯಂತೆ ಸಂಪ್ರದಾಯಬದ್ಧವಾಗಿ ಹುಟ್ಟಿದ ಊರಿನಲ್ಲಿ ಮದುವೆಯಾದರೂ ಹೆಂಡತಿಯೊಂದಿಗೆ ವಿದೇಶದಲ್ಲಿ ನೆಲೆಯೂರುತ್ತಾನೆ. ಅಷ್ಟರಲ್ಲೇ ಶಾರದೆಗೆ ಪತಿಯ ವಿಯೋಗವೂ ಉಂಟಾಗಿ ಇದ್ದ ಒಬ್ಬನೇ ಮಗನೊಂದಿಗೆ ತನ್ನ ಜೀವಿತದ ಕೊನೆಗಾಲವನ್ನು ಕಳೆಯುವ ತನ್ನ ಆಸೆಗಳು ಕೈಗೂಡದಿದ್ದಾಗ ಆಕೆ ಅಸಹಾಯಕಳಾಗುತ್ತಾಳೆ. ಮಗ ವಿದ್ಯಾಭ್ಯಾಸದ ಕಾರಣದಿಂದ ವಿದೇಶಕ್ಕೆ ಹೋಗುವ ಮುನ್ನ ಶಾರದೆ "ನಮ್ಮ ಮಕ್ಕಳು ದಡ್ಡರಾಗಿಯೇ ಇದ್ದಿದ್ದರೆ ಚೆನ್ನಾಗಿತ್ತೇನೋ ಅಂತ. ಹಾಗಿದ್ದರೆ ನನ್ನ ಮಗ ನನ್ನ ಹತ್ತಿರವೇ ಇರುತ್ತಿದ್ದ" ಎಂದು ಕೊಳ್ಳುವುದರ ಹಿಂದೆ ಆಕೆಯ ಮುಗ್ಧತನ ಹಾಗೂ ಮಗನೊಂದಿಗಿನ ಅವಿನಾಭಾವ ಸಂಬಂಧ ಕಾರಣವೆನ್ನಬಹುದು.*

***Keywords:*** *ಕನ್ನಡ ಸಾಹಿತ್ಯ, ಕಾದಂಬರಿ ಸಾಹಿತ್ಯ, ಎಂ.ಕೆ ಇಂದಿರಾ, ಪೂರ್ವಾಪರ, ಚಲನಚಿತ್ರ. ತಾಯಿ-ಮಗ.*

## ಪೀಠಿಕೆ

ಪಾಶ್ಚಾತ್ಯ ದೇಶಗಳ ಆಕರ್ಷಣೆ ಮತ್ತು ಅವು ಒದಗಿಸುವ ಉದ್ಯೋಗ ಅವಕಾಶಗಳು ತಾಯ್ನೆಲದ ಕುರಿತ ಅನುಬಂಧವನ್ನು ಹಿಂದಿನಿಂದಲೂ ಸಡಿಲಗೊಳಿಸುತ್ತಲೇ ಇವೆ. ಈ ಕಾರಣದಿಂದಲೇ 'ಸುಂದರ' ವಿದೇಶದಲ್ಲಿ ನೆಲೆಸಿ ಅಲ್ಲಿಯೇ ಉಳಿದುಬಿಡುವ ನಿರ್ಧಾರವನ್ನು ತನ್ನ ತಾಯಿಗೆ ತಿಳಿಸುತ್ತಾನೆ. ಶಾರದೆಯು ಮಗನನ್ನು ನೋಡಲು ವಿದೇಶಕ್ಕೆ ಹೋದಾಗ ಆಕೆಯಲ್ಲಿ ಕಾಡುವ ಒಂಟಿತನ ಪಾಶ್ಚಾತ್ಯ ದೇಶದ ಸಂಸ್ಕೃತಿ ಮತ್ತು ಅದರ ಭಿನ್ನತೆಯನ್ನು ಭಾರತೀಯತೆಯೊಂದಿಗೆ ಹೋಲಿಸಿ ನೋಡುವಂತೆ ಮಾಡುತ್ತದೆ. ಆದರೆ ಸಂಬಂಧಿಯೇ ಅಲ್ಲದ ಸುಂದರನ ಸ್ನೇಹಿತ ನರೇಂದ್ರ ವಿಮಾನ ನಿಲ್ದಾಣದಿಂದಲೂ ಶಾರದೆಯ ನೆರಳಿನಂತೆ ಆಕೆಯ ಬೇಕು- ಬೇಡಗಳನ್ನು ಗಮನಿಸಿಕೊಳ್ಳುತ್ತಲೇ ಆಕೆಯ ಮನಸ್ಸಿನಾಳಕ್ಕೆ ಇಳಿದು ಬಿಡುತ್ತಾನೆ. ಮಗ ಸುಂದರ ಮತ್ತವನ ಹೆಂಡತಿ ಕೆಲಸದ ಒತ್ತಡದಿಂದ ಶಾರದೆಯೊಂದಿಗೆ ಅಂತರ ಕಾಯ್ದುಕೊಂಡಿದ್ದರೂ

***Please cite this article as:*** ಅಭಿಷೇಕ್ ವೈ.ಎಸ್. (2025). ಎಂ.ಕೆ ಇಂದಿರಾ ಅವರ ಕಾದಂಬರಿ ಆಧಾರಿತ ಚಲನಚಿತ್ರ 'ಪೂರ್ವಾಪರ': ತಾಯಿ ಮಗನ ಸಂಬಂಧದ ಜಿಜ್ಞಾಸೆಗಳು. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವಲಪ್‌ಮೆಂಟ್,* 3(6), 67–71

ಅವಳನ್ನು ಸಂಪೂರ್ಣ ಅರ್ಥ ಮಾಡಿಕೊಂಡು ಸ್ವಂತ ಮಗನ ಸ್ಥಾನವನ್ನು ತುಂಬುತ್ತಾನೆ.

ನರೇಂದ್ರನಿಗೆ ತಂದೆ ತಾಯಿಗಳಿದ್ದರೂ ಅನಾಥನಂತೆ ಬದುವುದಕ್ಕೆ ಕಾರಣಗಳಿವೆ. ಮದ್ರಾಸಿನಿಂದ ನರೇಂದ್ರ ಮತ್ತವನ ತಂದೆ ತಾಯಿ ಕಾರಣಾಂತರಗಳಿಂದ ವಿದೇಶಕ್ಕೆ ಬಂದು ನೆಲೆಸಿದ್ದಾಗ ಆತನ ತಾಯಿ ಒಬ್ಬ ಸಂಗೀತಗಾರನನ್ನು ಮದುವೆಯಾದಾಗ, ತಂದೆಯೂ ಅನ್ಯ ಮದುವೆಯಾಗುತ್ತಾನೆ. ಪಾಶ್ಚಾತ್ಯ ದೇಶಗಳ ಸಂಬಂಧಗಳ ಪರಿ ಇಂಥವು. ಅವುಗಳು ನೈತಿಕ ಮತ್ತು ಭಾವನಾತ್ಮಕ ವ್ಯಾಪ್ತಿಯೊಳಕ್ಕೆ ಬಾರದಂಥವು ಅಲ್ಲಿಯವರಿಗೆ ಮೌಲ್ಯವೆನಿಸುತ್ತವೆ. ಇಪ್ಪತ್ತೆರಡು ವರ್ಷ ಪ್ರಾಯದ ನರೇಂದ್ರ ಅನಾಥವಾದಾಗ ಬದುಕುವ ಛಲ ಹುಟ್ಟಿ ವಿದೇಶದಲ್ಲಿಯೇ ನೌಕರಿ ಗಿಟ್ಟಿಸಿ ಒಂಟಿಯಾಗಿ ಬದುಕುತ್ತಾನೆ. ಸುಂದರನ ಮನೆಯ ಪಕ್ಕದಲ್ಲಿಯೇ ಇದ್ದದ್ದರಿಂದ ಸುಂದರನ ಕುಟುಂಬಕ್ಕೆ ಹತ್ತಿರವಾಗಿ ಅಂತಿಮವಾಗಿ ಶಾರದೆಯನ್ನು ತನ್ನ ತಾಯಿಯಾಗಿ ಕಾಣುತ್ತಾನೆ. ವೈರುಧ್ಯವೆಂದರೆ ಸ್ವಂತ ತಾನು ಹೆತ್ತ ಮಗ ಸುಂದರ ತಾಯಿಯಿಂದ ದೂರವಾಗುವ ಹಾಗೂ ಮಗನೇ ಅಲ್ಲದ ನರೇಂದ್ರ ಹತ್ತಿರವಾಗುವ ಅಪರೂಪದ ಚಿತ್ರಣವನ್ನು ಕಾದಂಬರಿಕಾರ್ತಿ ಕಟ್ಟಿಕೊಡುತ್ತಾರೆ. 'ಫ್ಲಾಶ್‌ಬ್ಯಾಕ್' ತಂತ್ರವನ್ನು ಕಾದಂಬರಿಕಾರ್ತಿ 'ಗೆಜ್ಜೆಪೂಜೆ', 'ಮುಸುಕು' ಕಾದಂಬರಿಗಳಂತೆಯೇ ಬಳಸಿದ್ದಾರೆ. ಮಗ ವಿದೇಶದಲ್ಲಿರುವಾಗ ತನ್ನ ಪತಿ ಕಾಲವಾದರೂ ಕರ್ಮಾಂತರಗಳನ್ನು ಮಾಡಲು, ಅಥವಾ ತಾಯಿಯನ್ನು ನೋಡಲು, ಆಕೆಗೆ ಸಾಂತ್ವನ ಹೇಳಲು ಬಾರದಷ್ಟು 'ಸಂಬಂಧ' ಶಿಥಿಲವಾಗಿದೆ. ಹಾಗಾದರೆ ಪಾಶ್ಚಾತ್ಯ ಸಂಸ್ಕೃತಿಗಳು ಕೊಟ್ಟ ಕೊಡುಗೆಗಳೇನು ಎಂಬ ಜಿಜ್ಞಾಸೆ ಕಾಡುತ್ತದೆ. ಕೆಲಸದೊತ್ತಡ ಕಾರಣವೊಂದನ್ನೇ ಮುಂದಿರಿಸಿಕೊಂಡು ರಕ್ತಸಂಬಂಧಗಳ ಜೊತೆ ಕಾಯ್ದುಕೊಳ್ಳುವ ಅಂತರ ನಿರರ್ಥಕ ಎನಿಸುತ್ತದೆ. ಶಾರದೆಯೊಂದಿಗಿನ ನರೇಂದ್ರನ ಮಾತುಗಳು ಪ್ರಬುದ್ಧವಾಗಿವೆ. "ನಮ್ಮ ದೇಶದ ಸ್ಥಿತಿ ಹಾಗಿದೆ ಮಾಡೋದೇನು. ಸೋಮಾರಿತನ ಬಡತನ ಅವರನ್ನ ಆ ಸ್ಥಿತಿಗಿಳಿಸಿದೆ. ಈ ದೇಶ ಶೀಲ, ನೀತಿವಂತಿಕೆಗೆ ಅಷ್ಟು ಮಹತ್ವ ಕೊಡುವುದಿಲ್ಲ ನಿಜ. ಆದರೆ ಕ್ರಿಯಾಶೀಲತೆ, ಕಾರ್ಯತತ್ಪರತೆ ಮಾಡುವ ಕೆಲದಲ್ಲಿ ಪೂರ್ಣ ದಕ್ಷತೆ, ನಂಬಿಕೆ ಇಟ್ಟಿರ್ತಾರೆ. ಸುಳ್ಳು ಕಳ್ಳತನ ಮೋಸ ವಂಚನೆಗಳಿಲ್ಲ. ಕಾರಣ ಪ್ರಪಂಚದಲ್ಲೇ ಸಂಪದ್ಭರಿತ ದೇಶ ಇದು. ಎಲ್ಲರಿಗೂ ಕೈತುಂಬ ಹಣ, ಸ್ವಾತಂತ್ರ್ಯ ಇದೆ. ಮೋಸದ ಬುದ್ಧಿ ಅವರಿಗೆ ಬರೋದೇ ಇಲ್ಲ"[1] ಎನ್ನುವ ನರೇಂದ್ರ ಪಾಶ್ಚಾತ್ಯ ದೇಶಗಳ ಔದ್ಯೋಗಿಕ ಅವಕಾಶಗಳು ಕುರಿತು ಹೇಳುತ್ತಾನಾದರೂ ನರೇಂದ್ರನ ಒಳ ಮನಸ್ಸಿನಲ್ಲಿ ಭಾರತದ ಕುರಿತು ಉದಾತ್ತ ಭಾವನೆಯಿದೆ. ಆ ಕಾರಣದಿಂದಲೇ ತನ್ನ ಜೀವಿತದ ಮುಂದಿನ ದಿನಗಳನ್ನು ಶಾರದೆಯೊಂದಿಗೆ ಭಾರತದಲ್ಲಿ ಕಳೆಯುವ ನಿರ್ಧಾರ ಮಾಡುತ್ತಾನೆ. ಶಾರದೆಗೆ ಸುಂದರನಿಗಿಂತ ನರೇಂದ್ರನೇ ಹೆಚ್ಚು ಸಮಯವನ್ನು ಕೊಟ್ಟು ಆಪ್ತನೆನಿಸುವುದು ವಿಶೇಷವಾಗಿದೆ. ತಂದೆ ತಾಯಿಗಳಿಂದ ದೂರವಾದ ನರೇಂದ್ರನ ಒಳ ಬೇಗುದಿಗಳ ಕಾರಣದಿಂದ ಶಾರದೆಗೆ ಹೆಚ್ಚು ಹತ್ತಿರವಾದ ನರೇಂದ್ರ ಮಗನ ಸ್ಥಾನವನ್ನು ತುಂಬುತ್ತಾನೆ. "ಈ ದೇಶದ ಜನರಿಗೆ ದುಃಖ ಅಂದ್ರೆ ಏನೋ ಅಂದೇ ಗೊತ್ತಿಲ್ಲ ಮನೇಲಿ ಮಕ್ಕಳು ಹುಟ್ಟಿದರೆ ಸಂತೋಷ ಪಡೋರೂ ಇಲ್ಲ. ಯಾರಾದ್ರೂ ಸತ್ರೆ ಅಳೋರೂ ಇಲ್ಲ. ತುಂಬಾ ಸ್ನೇಹಿತರಾದೋರು, ಪ್ರಸಿದ್ಧಿಯಾದೋರು ಸತ್ರೆ ಒಂದು ಗಳಿಗೆ ಹೋಗಿ ಅಂತಿಮ ಗೌರವ ಸಲ್ಲಿಸಿ ಬಂದ್ರೆ ಅವರ ಕೆಲಸ ಮುಗೀತು. ಅದರಲ್ಲೂ ತೀರಾ ಮುದುಕರಾಗಿ ಸತ್ರಂತೂ ದೇವರೇ ಗತಿ . ಕಾರ್ಪೋರೇಷನ್ ವ್ಯಾನ್ನಲ್ಲಿ ತಗೊಂಡೋಗಿ ಸಮಾಧಿ ಮಾಡಿ ಬರ್ತಾರೆ."[2] ಎನ್ನುವ ಆ ದೇಶದ ನಿರ್ಭಾವುಕ ಜನರ ಮನಸ್ಥಿತಿಯ ಬಗ್ಗೆ ಶಾರದೆಗೆ ತಿಳಿಸುತ್ತಾನೆ.

---

[1] ಇಂದಿರಾ, ಎಂ.ಕೆ. (2016). ಪೂರ್ವಾಪರ. ಪುಟ.7 . ಪುಟ. 55

[2] *ಅದೇ.* ಪುಟ. 48

ಪಾಶ್ಚಿಮಾತ್ಯ ದೇಶಗಳ ಬಿಡುವಿಲ್ಲದ ದಿನಚರಿಯಲ್ಲಿ ಸಂಬಂಧ, ಭಾವುಕತೆ, ಪ್ರೀತಿ, ಮಮತೆಗಳು ಮಾರಲಾರದ ಸರಕುಗಳಂಥಾಗಿರುವುದು ವಿಪರ್ಯಾಸವೇ ಸರಿ. ಎಲ್ಲದಕ್ಕೂ ಯಂತ್ರಗಳನ್ನು ಅವಲಂಭಿಸಿರುವ ಜನರು ಯಂತ್ರಗಳಂತೆಯೇ ಆಗಿರುವುದು ಅಲ್ಲಿನ ವ್ಯವಸ್ಥೆಗೆ ಹಿಡಿದ ಕೈಗನ್ನಡಿಯಾಗಿದೆ. ಇಲ್ಲಿ ನರೇಂದ್ರ ಶಾರದೆಗೆ ಆಪ್ತನಾಗುವುದು ಆ ಮೂಲಕ ತಾಯಿ ಮಗನ ಸಂಬಂಧಕ್ಕೆ ಹೊಸದೊಂದು ವ್ಯಾಖ್ಯಾನವನ್ನು ಲೇಖಕಿ ಬರೆದಿದ್ದಾರೆ. "ನನ್ನ ಎದುರಿನ ಜೀವನ ಪ್ರವಾಹದಲ್ಲಿ ಸಹಸ್ರಾರು ಜನ ತೇಲಿ ಹೋಗಿದ್ದಾರೆ. ಈಗ ನನ್ನನ್ನು ಹಿಡಿದು ನಿಂತಿರುವವರು ಈ ಪರಿಚಿತ ನರೇಂದ್ರ. ನನ್ನ ಹೊಟ್ಟೆಯ ಕೂಸು ಸುಂದರನಿಗಿಂತ ಹತ್ತಿರವಾಗುತ್ತಿದ್ದಾನೆ"[3] ಎಂಬ ಆಕೆಯ ತೊಳಲಾಟ ಓದುಗರನ್ನು ಹಿಡಿದಿಡುತ್ತದೆ. ಮಗ ಕೇವಲ ಶಾರದೆಯನ್ನು ಉಪಚರಿಸಿದರೂ ಅದು ಯಾಂತ್ರಿಕವೇ. ಊರಿನವರ ಕುರಿತು ಒಂದೂ ಮಾತನ್ನಾಡದ ಮಗನ ಮೌನದ ಕುರಿತು ಶಾರದೆ ಕಳವಳ ವ್ಯಕ್ತ ಪಡಿಸುತ್ತಾಳೆ. ಆದರೆ ನರೇಂದ್ರ ಊರಿನವರ, ಚಿಕ್ಕಮ್ಮ, ನಾಗಣ್ಣ ಸುಬ್ಬಿಯರ ಕುರಿತು ವಿಚಾರಿಸಿಕೊಳ್ಳುವಾಗ ಮಗನಿಗಿಂತಲೂ ಹತ್ತಿರವಾಗುತ್ತಾನೆ. ಪ್ರತಿ ಭಾನುವಾರ ಹೆಂಡತಿಯೊಂದಿಗೆ ಸುತ್ತಾಟಕ್ಕೆ ಹೊರ ಹೋಗುವ ಸುಂದರ, ತಾಯಿಯ ಜವಾಬ್ದಾರಿಯನ್ನು ನರೇಂದ್ರನಿಗೆ ವಹಿಸುತ್ತಾನೆ. ಆಕೆಯ ಕಾಲಿಗೆ ಕಾಲ್ಚೀಲ, ಮೈಗೆ ಸ್ವೆಟರ್ ತೊಡಿಸುವುದರಿಂದ ಹಿಡಿದು ಆಕೆಗೆ ಮನೆಯಲ್ಲಿನ ದಿನಬಳಕೆಯ ಅತ್ಯಾಧುನಿಕ ಸಲಕರಣೆಗಳನ್ನು ಉಪಯೋಗಿಸುವುದರವರೆಗೂ ಪ್ರತಿಯೊಂದನ್ನೂ ಶಾರದೆಗೆ ಹೇಳಿಕೊಡುವ ನರೇಂದ್ರ ಮಗನ ಸ್ಥಾನವನ್ನು ತುಂಬುತ್ತಾನೆ. "ಸುಂದ್ರೀ ಶಾಶ್ವತವಾಗಿ ಅಲ್ಲೇ ಉಳಿಯುವವನು. ಇನ್ನು ಹತ್ತುವರ್ಷ ಅವನು ಅಲ್ಲಿದ್ದರೆ ಅವನಿಗೆ ಅಲ್ಲಿಯ ಸಿಟಿಜನ್ ಶಿಪ್ ಸಿಕ್ಕುತ್ತೆ. ಈ ಮಧ್ಯೆ ಬಂದರೆ ಮಗಳ ವಿದ್ಯಾಭ್ಯಾಸ ಹಾಳು. ಈಗ ಅವನು ಭಾರತೀಯನಾಗಿ ಉಳಿದಿಲ್ಲ. ಆದರೆ ಅವನ ಮೇಲೆ ಕೋಪ ಬೇಡ. ಅವನು ನಿನ್ನ ಮಗನಲ್ಲವೇ? ಏನಂದರೂ ನಿನ್ನದು ಉದಾರ ಮನಸ್ಸು, ಆ ದೇಶಕ್ಕೆ ಕೊಟ್ಟೆ. ಅಲ್ಲಿಯ ಈ ಭಿಕಾರಿಯನ್ನು ಮಗನನ್ನಾಗಿ ಸ್ವೀಕರಿಸಿದ್ದಿ. ಏಳು ವರ್ಷಗಳ ಹಿಂದೆ ನನ್ನ ಮೆದುಳಿಗೆ ಆಘಾತವಾಗಿತ್ತು. ಆ ಗಾಯ ನನಗೆ ವಾಸಿಯಾಗಿದೆ. ಈಗ ನಿನ್ನ ಮನಸ್ಸಿಗೆ ಬಹು ದೊಡ್ಡ ನೋವಾಗಿದೆ. ಅದನ್ನು ವಾಸಿ ಮಾಡುವ ಶಕ್ತಿ ನನ್ನಲ್ಲಿಲ್ಲ ನಿಜ. ನನ್ನ ಹಿರಿಯರ ಹೊಲಸು ಇತಿಹಾಸ ತಿಳಿದೂ, ಕಂಡೂ ನನ್ನನ್ನು ನಿನ್ನ ಮಡಿಲಿಗೆ ಹಾಕಿಕೊಂಡೆಯಲ್ಲ. ನಾನು ವಿಶ್ವಪರ್ಯಟನ ಮಾಡಿದವನು. ನಾನು ಕಂಡ ತುಂಬಾ ಆಶ್ಚರ್ಯದ ಅಮೂಲ್ಯ ವಸ್ತು ಎಂದರೆ ನೀನು. ನಿನ್ನ ನೆರಳಿನಲ್ಲಿ ನಾನು ಪ್ರಶಾಂತವಾಗಿ ಇರ್ತೇನೆ. ನನಗೆ ಯಾವ ಆಡಂಬರ, ಡೌಲುಗಳು ಬೇಡ. ಅದೆಲ್ಲ ಬೋರಿಟ್ಟಿದೆ. ಸರಳ, ಸಹಜ ಬದುಕು ಸಾಕು ನನಗೆ. ನಿನಗೆ ತೋರಿದಂತೆ ಮಾಡು"[4] ಎನ್ನುವ ನರೇಂದ್ರ ಪ್ರಬುದ್ಧ ಮಾತುಗಳನ್ನಾಡುತ್ತಾನೆ ಹಾಗೂ ಶಾರದೆಯೊಂದಿಗೆ ಭಾರತಕ್ಕೆ ಬಂದು ಹೊಸದೊಂದು ಎಸ್ಟೇಟ್ ಖರೀದಿಸಿ ನಾಗಣ್ಣನ ಹೆಂಡತಿ ಸುಬ್ಬಮ್ಮಳ ತಂಗಿ ಅಂಬಿಕಾದೇವಿಯನ್ನು ಮದುವೆಯಾಗುವ ನಿರ್ಧಾರ ಕೈಗೊಳ್ಳುತ್ತಾನೆ.

ಇದೇ ಕಾದಂಬರಿಯನ್ನಾಧರಿಸಿ ಕುಡವಳ್ಳಿ ಚಂದ್ರಶೇಖರ್ ಅವರು ತಮ್ಮ ಚೊಚ್ಚಲ ನಿರ್ದೇಶನದಲ್ಲಿ 2004ರಲ್ಲಿ 'ಪೂರ್ವಾಪರ' ಚಲನಚಿತ್ರವನ್ನು ತೆಗೆದರು. ಗೀತಾ, ಶ್ರೀನಾಥ್, ನವೀನ್ ಮಯೂರ್, ಲಕ್ಷ್ಮೀಗೋಪಾಲಸ್ವಾಮಿ ಮುಂತಾದವರು ಮುಖ್ಯ ಪಾತ್ರದಲ್ಲಿದ್ದರು. 'ಟೊರಾಂಟೋ' ಅಂತರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಪ್ರದರ್ಶಿಸಲ್ಪಟ್ಟ ಮೊದಲ ಕನ್ನಡ ಚಲನಚಿತ್ರ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಕಾದಂಬರಿಯ ಸ್ವರೂಪದಲ್ಲಿ ಪೂರ್ಣ ಪ್ರಮಾಣದಲ್ಲಿ

[3] *ಅದೇ. ಪುಟ.* 68

[4] *ಅದೇ. ಪುಟ.* 134

ಬದಲಾವಣೆಯನ್ನು ಮಾಡಿಕೊಳ್ಳದೆ ಅಲ್ಲಲ್ಲಿ ಅಲ್ಪಸ್ವಲ್ಪ ಬದಲಾವಣೆಗಳನ್ನು ಮಾಡಿಕೊಂಡು ಚಿತ್ರವನ್ನು ತೆಗೆಯಲಾಗಿದೆ. ಫ್ಲಾಶ್‌ಬ್ಯಾಕ್ ತಂತ್ರದಿಂದಲೇ ಚಲನಚಿತ್ರದ ಆರಂಭವಾಗುತ್ತದೆ. ಶೃಂಗೇರಿಯ ಸಾಂಪ್ರದಾಯಿಕ ಬ್ರಾಹ್ಮಣ ಸಂಪ್ರದಾಯದ ಕುಟುಂಬದ ಸುತ್ತ ಹೆಣೆಯಲಾದ ಚಿತ್ರವಾಗಿದ್ದರೂ ಪಾಶ್ಚಿಮಾತ್ಯ ರಾಷ್ಟ್ರದ ಬದುಕಿನ ಕ್ರಮ, ಅಲ್ಲಿಯ ಜೀವನ ಶೈಲಿಯ ಕುರಿತ ಹಲವು ಮಾಹಿತಿಗಳ ಕುರಿತು ಬೆಳಕು ಚೆಲ್ಲುತ್ತದೆ. ವಿದೇಶದಲ್ಲಿ ಓದಿಗೆಂದು ಹೋಗುವ ಮಗ ತನ್ನ ಹೆಂಡತಿ ಮಗುವಿನೊಂದಿಗೆ ಅಲ್ಲಿಯೇ ಬದುಕುವ ನಿರ್ಧಾರವನ್ನು ತನ್ನ ತಾಯಿಯ ಬಳಿ ಹೇಳಿದಾಗ ತಾಯಿಯ ಮನಸ್ಸಿನಲ್ಲಿ ಉಂಟಾಗುವ ತಲ್ಲಣ, ತವಕ, ಹತಾಶೆಗಳು ಪ್ರೇಕ್ಷಕರನ್ನು ಕಾಡುತ್ತವೆ. ಕಾದಂಬರಿಯ ಮೂಲ ಸ್ವರೂಪದಲ್ಲಿ ಯಾವ ವ್ಯತ್ಯಾಸಗಳೂ ಕಾಣದ ಹಾಗೆ ಚಿತ್ರವನ್ನು ನಿರ್ದೇಶಿಸಲಾಗಿದೆ. ಸುಂದರನನ್ನು ಆಡಿಸಿ ಬೆಳೆಸಿದ ವಿಧವೆ ಚಿಕ್ಕಮ್ಮ, ಶಾರದೆಯನ್ನು ಅಮೇರಿಕಾಗೆ ಹೋಗಿ ಮಗನೊಂದಿಗೆ ಒಂದಿಷ್ಟು ದಿನ ಇದ್ದು ಬಾ ಎನ್ನಲು 'ಲೋಕವನ್ನೇ ಬಿಟ್ಟೋಗುತ್ತೇವೆ ಇನ್ನು ದೇಶ ಯಾವ ಮಹಾ' ಎಂದು ಆಕೆ ಆಡುವ ವೈರಾಗ್ಯದ ಮಾತುಗಳು ಚಿಂತನೆಗೆ ಓರೆ ಹಚ್ಚುತ್ತವೆ. ಅಮೇರಿಕಾಗೆ ಮಗನನ್ನು ನೋಡಲು ಹೊರಟ ತಾಯಿ ವಿಮಾನದಲ್ಲಿಯೇ ಹಿಂದೆ ನಡೆದದ್ದೆಲ್ಲವನ್ನು ಮೆಲುಕುಹಾಕುತ್ತಾಳೆ. ಪತಿಯನ್ನು ಕಳೆದುಕೊಂಡ ನಂತರ ಮಗನನ್ನು ನೋಡಲು ಹೋಗುವ ತಾಯೊಬ್ಬಳ ಸಂಕಟ, ತಾಕಲಾಟಗಳನ್ನು ದೃಶ್ಯಗಳಲ್ಲಿ ಸಮರ್ಥವಾಗಿ ಕಟ್ಟಿಕೊಡಲಾಗಿದೆ. ಅಮೇರಿಕಾದಲ್ಲಿ ಮಗನ ಗೆಳೆಯನಾಗಿರುವ ನರೇಂದ್ರನೊಂದಿಗಿನ ಒಡನಾಟ ಮಗನಿಗಿಂತ ಹತ್ತಿರವಾಗುತ್ತದೆ. ಮಗನ ಪಾತ್ರವನ್ನು ನಿಭಾಯಿಸುವಲ್ಲಿ ವಿಫಲನಾಗುವ ಸುಂದರನ ಸ್ಥಾನವನ್ನು ನರೇಂದ್ರ ತುಂಬುವಲ್ಲಿ ಸಫಲನಾಗುತ್ತಾನೆ. ಮಗನಾಗಲು ಹೊರಟ ನರೇಂದ್ರನ ಮೇಲೆ ಸುಂದರ ಎರಡು ಬಾರಿ ಈ ವಿಷಯಕ್ಕೇ ಹರಿಹಾಯ್ದು ತನ್ನ ತಪ್ಪಿನ ಅರಿವಾದಮೇಲೆ ಅವನನ್ನು ಕ್ಷಮೆ ಕೇಳುತ್ತಾನೆ. ಕೆಲಸದ ಒತ್ತಡದ ಮಧ್ಯೆ ಬಂಧಿಯಾದ ಸುಂದರನಿಗೆ ತಾಯಿಯ ಮೇಲೆ ಪ್ರೀತಿಯಿದ್ದರೂ ಅವನನ್ನು ಅಮೇರಿಕಾವೆಂಬ ಮಹಾ ನಗರ ಆವರಿಸಿ ಬಿಟ್ಟಿದೆ. ಉನ್ನತ ವ್ಯಾಸಂಗ ಮಾಡಿದ ತನಗೆ ಶೃಂಗೇರಿಯಲ್ಲಿ ಕೆಲಸ ಸಿಗುವುದಿಲ್ಲ ಎಂಬ ಸತ್ಯ ಗೊತ್ತಾದದ್ದರಿಂದಲೇ ಸಂಸಾರವನ್ನು ಅಮೇರಿಕಾದಲ್ಲಿಯೇ ಉಳಿಸಿಕೊಳ್ಳುವ ನಿರ್ಧಾರ ಮಾಡುತ್ತಾನೆ. ಹಾಗೆ ನೋಡುವುದಾದರೆ ಸುಂದರನೇನೂ ಕೆಟ್ಟವನಲ್ಲ. ಪರಿಸ್ಥಿತಿ ಅವನನ್ನು ಅಸಹಾಯಕನನ್ನಾಗಿ ನಿಲ್ಲಿಸಿದೆ. ಎಂಭತ್ತರ ದಶಕದಲ್ಲಿ ಭಾರತದಾಚೆ ವಿದೇಶದಲ್ಲಿ ಸಿಗುವ ಉದ್ಯೋಗ ಭದ್ರತೆಗಳು, ಅಲ್ಲಿನ ಅವಕಾಶಗಳ ಕಾರಣಗಳು ಪಾಶ್ಚಿಮಾತ್ಯ ದೇಶಗಳ ಕಡೆ ಆಕರ್ಷಿತವಾಗುವಂತೆ ಮಾಡಿದವು. ಹೀಗಾಗಿಯೇ ಉದೋಗದ ಅಭದ್ರತೆಯ ಕಾರಣವೇ ಆತನನ್ನು ಭಾರತಕ್ಕೆ ಬಾರದಂತೆ ಅಲ್ಲಿಯೇ ಹಿಡಿದಿಟ್ಟಿವೆ. ಸುಂದರ ಭಾರತಕ್ಕೆ ಹೋಗುವುದರ ನಿಲುವಿನ ಬಗೆಗೆ ಹೆಂಡತಿಯ ಅಭಿಪ್ರಾಯವನ್ನು ಕೇಳುವಷ್ಟು ಪ್ರಾಜ್ಞನಾಗಿದ್ದಾನೆ. ಹೀಗಾಗಿ ಸುಂದರ ತಾಯಿಯಿಂದ ದೂರವುಳಿದರೂ ಆಕೆಗೆ ಹತ್ತಿರದಲ್ಲಿ ನಿಲ್ಲುತ್ತಾನೆ. ಚಿತ್ರದ ಕೊನೆಯ ನರೇಂದ್ರನ ಭಾರತಕ್ಕೆ ಹೋಗಿ ಶಾರದೆಯೊಂದಿಗೆ ನೆಲೆಸುವ ನಿರ್ಧಾರಗಳು ಪ್ರೇಕ್ಷಕರನ್ನು ಮೈನವಿರೇಳಿಸುವಂತೆ ಮಾಡುತ್ತವೆ. ಹಿನ್ನೆಲೆ ಸಂಗೀತದ ಪರಿಣಾಮಕಾರಿ ಬಳಕೆ ಚಿತ್ರದ ತೂಕವನ್ನು ಹೆಚ್ಚಿಸಿದೆ.

**ಕಾದಂಬರಿ ಮತ್ತು ಚಲನಚಿತ್ರ ಇವುಗಳ ನಡುವಿನ ಭಿನ್ನತೆಗಳು**

1. ಕಾದಂಬರಿಯಲ್ಲಿ ಸುಂದರ ಹಾಗೂ ಸುಲೋಚನ ಇಬ್ಬರು ಮಕ್ಕಳು, ಚಲನಚಿತ್ರದಲ್ಲಿ ಸುಂದರ ಒಬ್ಬನೇ ಮಗ.
2. ಕಾದಂಬರಿಯಲ್ಲಿ ನರೇಂದ್ರ ಶಾರದೆಯೊಂದಿಗೆ ಭಾರತಕ್ಕೆ ಬರುವುದರ ಜೊತೆಗೆ ನಾಗಣ್ಣನ ಹೆಂಡತಿ ಸುಬ್ಬಮ್ಮಳ ಮಗಳು ಅಂಬಿಕಾಳನ್ನು ಮದುವೆಯಾಗುವ ನಿರ್ಧಾರ ಮಾಡುತ್ತಾನೆ,

ಚಲನಚಿತ್ರದಲ್ಲಿ ಶಾರದೆಯೊಂದಿಗೆ ಭಾರತಕ್ಕೆ ಹೋಗುವ ನಿರ್ಧಾರವಷ್ಟೇ ಮಾಡುತ್ತಾನೆ.

3. ಕಾದಂಬರಿಯಲ್ಲಿನ ಸುಂದರ ತಾಯಿ ಅಮೇರಿಕಾಗೆ ಬಂದಾಗ ಆಕೆಯೊಂದಿಗೆ ಹೆಚ್ಚು ಸಮಯ ಕಳೆಯುವುದಿಲ್ಲ. ಪ್ರತಿಭಾನುವಾರಗಳೂ ಹೆಂಡತಿಯೊಂದಿಗೆ ಹೊರಗೆ ಹೋಗುವ ಅಭ್ಯಾಸವಿರಿಸಿಕೊಂಡಿದ್ದನು. ಚಲನಚಿತ್ರದಲ್ಲಿ ಸುಂದರ ತಾಯಿಯೊಂದಿಗೆ ಹೊರಗೆ ಸುತ್ತಾಡುವುದು, ಶಾಪಿಂಗ್ ಹೋಗುವ ಮೂಲಕ ತಾಯಿಗೂ ಸಮಯ ಕೊಡುತ್ತಾನೆ.
4. ಕಾದಂಬರಿಯಲ್ಲಿ ಆಹಾರ ಸಂಸ್ಕೃತಿಯ ಕುರಿತು ಚರ್ಚಿಸಲಾಗಿದೆ. ಮಾಂಸಾಹಾರವನ್ನು ಕುರಿತಂತೆ ಅಸಹನೆ, ವಿರೋಧದ ನುಡಿಗಳಿವೆ. ಚಲನಚಿತ್ರದಲ್ಲಿ ಇಂಥ ಸೂಕ್ಷ್ಮ ವಿಚಾರಗಳ ಪ್ರಸ್ತಾಪವಿಲ್ಲ.
5. ಸಾಮಾಜಿಕವಾಗಿ ಜೀವಂತವಾಗಿದ್ದ ಅನಿಷ್ಟ ವ್ಯವಸ್ಥೆಗಳ ಕುರಿತು ಲೇಖಕಿ ಕಾದಂಬರಿಯಲ್ಲಿ ಎತ್ತಿದ ಪ್ರಶ್ನೆ ಚರ್ಚಾಸ್ಪದವಾಗಿದೆ. "ಶಾರದಾ ಗಂಡ ಹೋದ ಕೂಡಲೇ ಕೂದಲು ತೆಗೆಸೋ ಸಂಪ್ರದಾಯ ಬಹಳ ಹಳೆಯದಾಯಿತು. ಒಂದು ಪಕ್ಷ ನಾನೇದರೂ ಹೋದರೆ ಅಂಥ ಕೆಲಸ ಮಾತ್ರ ನೀನು ಮಾಡಬೇಡ. ಮದುವೇಗೆ ಮುಂಚೆ ನಾನು ಶೃಂಗೇರೀಲಿ ನಿನಗಿಂತ ನಿನ್ನ ಜಡೆ ನೋಡಿ ಮೆಚ್ಚಿದ್ದೆ. ನಿನ್ನ ಮುಖ ಸರಿಯಾಗಿ ನೋಡಿದ್ದು ಮದುವೇಲೆ. ನಿನ್ನ ಕೂದಲನ್ನು ಮಾತ್ರ ಕೊಂಕಿಸಬೇಡ."[5] ವೈಧವ್ಯದ ಕಾರಣದಿಂದ ಹೆಣ್ಣೊಬ್ಬಳ ಕೇಶ ಮುಂಡನದದಂಥಹ ಆಚರಣೆಯನ್ನು ನಿಲ್ಲಿಸಬೇಕೆಂಬ ಆಶಯದಲ್ಲಿ ಶಾರದೆಯ ಗಂಡನ ಪಾತ್ರದ ಮೂಲಕ ಆಡಿಸುವ ಮಾತುಗಳು ಮುಖ್ಯವಾಗಿವೆ. ಆದರೆ ಈ ದೃಶ್ಯ ಚಲನಚಿತ್ರದಲ್ಲಿಲ್ಲ.

ಹೀಗೆ ಕೆಲ ಬದಲಾವಣೆಗಳೊಂದಿಗೆ ಚಿತ್ರವನ್ನು ತೆಗೆಯಲಾಗಿದೆಯೇ ವಿನಃ ಕಾದಂಬರಿಯ ಮೂಲ ಸ್ವರೂಪ ಮತ್ತು ಆಶಯಕ್ಕೆ ಧಕ್ಕೆ ಬಾರದಂತೆ ಚಲನಚಿತ್ರವನ್ನು ತೆಗೆಯಲಾಗಿದೆ. ಕೌಟುಂಬಿಕ ವಾತಾವರಣಗಳು ಕಲುಷಿತವಾಗುತ್ತಿರುವ ಸಂದರ್ಭದಲ್ಲಿ ಲೇಖಕಿಯವರ ದೂರದೃಷ್ಟಿ ಮತ್ತು ಅದನ್ನು ಚಲನಚಿತ್ರವನ್ನಾಗಿಸಿರುವ ನಿರ್ದೇಶಕರಿಬ್ಬರೂ ಮುಖ್ಯವೆನಿಸುತ್ತಾರೆ. ವಿದೇಶದ ಆಕರ್ಷಣೆಯಿಂದ ದೇಶ ಬಿಟ್ಟು ಪರದೇಶದಲ್ಲಿ ನೆಲೆಕಾಣುತ್ತಿರುವ ಯುವ ಸಮುದಾಯ ದೇಶದ ಸಂಸ್ಕೃತಿ, ಆಚಾರ, ವಿಚಾರ, ಕೌಟುಂಬಿಕ ವ್ಯವಸ್ಥೆಗಳಂತಹ ಸಾಮಾಜಿಕ ಸಂಸ್ಥೆಗಳನ್ನು ಧಿಕ್ಕರಿಸುತ್ತಾ ಸ್ವೇಚ್ಛೆಯಿಂದ ಬದುಕುವ ಪರಿಯನ್ನು ಕಾದಂಬರಿ ತಣ್ಣಗೇ ಕಂಡು ಎಚ್ಚರಿಸಿದೆ. ಚಲನಚಿತ್ರವೂ ತಾಯಿ–ಮಗನ ಸಂಬಂಧದ ಮಹತ್ವವನ್ನು ತಿಳಿಸುತ್ತಲೇ ರಕ್ತಸಂಬಂಧವಿಲ್ಲದ ಅನ್ಯ ವ್ಯಕ್ತಿ ಸಂಬಂಧದ ಬೆಸುಗೆಗೆ ಹೇಗೆ ತಾನು ತನ್ನನ್ನು ಅರ್ಪಿಸಿಕೊಳ್ಳಬಲ್ಲ ಎಂಬ ಅಪೂರ್ವ ಕಥಾನಕ ಇದಾಗಿದೆ.

## ಆಕರ ಗ್ರಂಥ


- ಇಂದಿರಾ, ಎಂ.ಕೆ. (2016). *ಪೂರ್ವಾಪರ.* (4ನೇ ಮುದ್ರಣ). ಅನಿತಾ ಪ್ರಕಾಶನ.


[5] *ಅದೇ.* ಪುಟ. 112